



ಅರುಣ ಪಿ. ಭಟ್ಟ

## ವಾರಭವಿಷ್ಯ 29.10.2020ರಿಂದ 4.11.2020ರವರೆಗೆ




ವಾರದ ಶುರುವಿನಲ್ಲಿ ಕೆಲವು ದೈಹಿಕ ಸಮಸ್ಯೆಗಳು ಎದುರಾಗಲಿವೆ. ಕೌಟುಂಬಿಕ ವಿಷಯಗಳ ಬಗ್ಗೆ ಅಳೆದು ತೂಗಿ ವ್ಯವಹರಿಸಿ. ಇತ್ತೀಚಿನ ಬೆಳವಣಿಗೆಗಳಿಂದ ನಿಮ್ಮ ಸಂಗಾತಿಗೆ ಉದ್ಭವಿಸಿರುವ ಕೆಲ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗುತ್ತದೆ. ಅದೇ ರೀತಿ ನಿಮ್ಮಲ್ಲಿ ಇರುವ ಹಲವು ಪ್ರಶ್ನೆಗಳಿಗೆ ಉತ್ತರ ಪಡೆಯಲು ಪ್ರಯತ್ನಿಸುತ್ತೀರಿ. ಶುಭದಿನ 1. ವಿಷ್ಣು ಸಹಸ್ರನಾಮ ಪಠಿಸಿರಿ.

---




ಅನುಭವಿ ಹಿರಿಯರಿಂದ ಅವಶ್ಯವಾದ ಜ್ಞಾನ ಸಂಪಾದನೆ ಮಾಡುತ್ತೀರಿ. ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ಬಹಳ ಉತ್ತಮವಾದ ಸಮಯ. ಆತ್ಮವಿಶ್ವಾಸ ಹೆಚ್ಚಾಗಲಿದೆ. ಕುಟುಂಬಸ್ಥರಿಗೆ ನಿಮ್ಮ ಮೇಲಿನ ಪ್ರೀತಿ ಹಾಗೂ ಕಾಳಜಿ ಹೆಚ್ಚಾಗಲಿದೆ. ವಾರದ ಮಧ್ಯ ಭಾಗದಲ್ಲಿ ಖರ್ಚು ಬಹಳ ಹೆಚ್ಚಾಗಲಿದೆ. ಇದರಿಂದ ಚಿಂತೆಗೆ ಒಳಗಾಗುತ್ತೀರಿ. ಶುಭದಿನ 4. ಹನುಮಾನ್ ಚಾಲೀಸ್ ಓದಿರಿ.

---




ವ್ಯಾಪಾರ ವ್ಯವಹಾರ ಮಾಡುವವರಿಗೆ ಉತ್ತಮ. ಬಹಳ ಕಾಲದಿಂದ ಮನಸಿನಲ್ಲಿ ಇಟ್ಟುಕೊಂಡು ಬಂದ ಆಸೆ ಪೂರೈಸಿಕೊಳ್ಳಲು ಅವಕಾಶ ದೊರೆಯುತ್ತದೆ. ಈ ಅವಧಿಯಲ್ಲಿ ಸಮಸ್ಯೆಗಳ ನಿವಾರಣೆಗೆ ನಿಮಗೆ ದಾರಿ ದೊರೆಯುತ್ತದೆ. ಆರೋಗ್ಯವು ಉತ್ತಮವಾಗಿರುತ್ತದೆ. ದೈನಂದಿನ ಕೆಲಸ ಕಾರ್ಯಗಳಲ್ಲಿ ಯಾವ ಬದಲಾವಣೆಯೂ ಅಗತ್ಯ ಎನಿಸುವುದಿಲ್ಲ. ಶುಭದಿನ 30. ಆಂಜನೇಯ ಉಪಾಸನೆ ಮಾಡಿರಿ.

---




ವಾರದ ಆರಂಭದಲ್ಲಿ ಸಾಮಾಜಿಕ ಸ್ಥಾನಮಾನ ಹೆಚ್ಚಿಸಿಕೊಳ್ಳುವುದಕ್ಕೆ ಶ್ರಮವನ್ನು ಹಾಕುತ್ತೀರಿ. ಈ ಅವಧಿಯಲ್ಲಿ ಕುಟುಂಬವು ನಿಮ್ಮ ಬೆಂಬಲಕ್ಕೆ ಸಿದ್ಧವಾಗಿರುತ್ತದೆ. ಇನ್ನು ಕೆಮ್ಮು, ನೆಗಡಿಯಂಥ ಅನಾರೋಗ್ಯ ಸಮಸ್ಯೆಗಳು ನಿಮ್ಮನ್ನು ಕಾಡಬಹುದು. ವಾರದ ಮಧ್ಯ ಭಾಗದಲ್ಲಿ ಕೌಟುಂಬಿಕ ವಿಚಾರಗಳಲ್ಲಿ ಅಭಿವೃದ್ಧಿ. ಸಂತಾನ ಅಪೇಕ್ಷಿತ ದಂಪತಿಗೆ ಶುಭ ಸುದ್ದಿ ಕೇಳುವ ಯೋಗ ಇದೆ. ಶುಭದಿನ 29. ಸೌಂದರ್ಯ ಲಹರಿ ಪಠಿಸಿರಿ.

---




ಉದ್ಯೋಗಸ್ಥರು ಬಹಳ ವೇಗವಾಗಿ ತಮ್ಮ ಪಾಲಿನ ಕೆಲಸವನ್ನು ಮಾಡಿ ಮುಗಿಸುತ್ತೀರಿ. ಮನೆಯಲ್ಲಿ ಹಣಕಾಸು ಪರಿಸ್ಥಿತಿ ಚೆನ್ನಾಗಿರದೆ ಕುಟುಂಬ ಸದಸ್ಯರು ಈ ಪರಿಸ್ಥಿತಿಗೆ ನೀವೇ ಕಾರಣ ಎಂದು ದೂರುತ್ತಾರೆ. ಪದೇ ಪದೇ ಆರೋಪ ಹೊತ್ತುಕೊಂಡು ಬೇಸರಕ್ಕೆ ಒಳಗಾಗುತ್ತೀರಿ. ಯಾರನ್ನೂ ನಂಬಬಾರದು ಎಂದು ತಕ್ಷಣಕ್ಕೆ ತೀರ್ಮಾನಕ್ಕೆ ಬರುವ ಸಾಧ್ಯತೆ ಇದೆ. ಶುಭದಿನ 31. ಸಂಕಷ್ಟ ಹರ ಗಣಪತಿಗೆ ದೂರ್ವಾರ್ಚನೆ ಮಾಡಿರಿ.

---




ವಾರದ ಶುರುವಿನಲ್ಲಿ ಕೌಟುಂಬಿಕ ಜೀವನ ತುಂಬ ಚೆನ್ನಾಗಿರುತ್ತದೆ. ಕುಟುಂಬ ಸದಸ್ಯರ ಮೇಲೆ ನಿಮಗಿರುವ ವಿಶ್ವಾಸ ಮತ್ತಷ್ಟು ಹೆಚ್ಚಾಗುತ್ತದೆ. ಸಂಗಾತಿ ಮತ್ತು ಮಕ್ಕಳ ಜತೆಗೆ ಹೆಚ್ಚಿನ ಸಮಯ ಕಳೆಯುತ್ತೀರಿ. ಆರೋಗ್ಯವು ಉತ್ತಮವಾಗಿರುತ್ತದೆ. ಪಿತ್ರಾರ್ಜಿತ ಆಸ್ತಿ ಮೇಲೆ ಯಾರೋ ಒಬ್ಬರು ಹಕ್ಕು ಚಲಾಯಿಸುವ ಸಾಧ್ಯತೆ ಇದೆ. ಕೌಟುಂಬಿಕ ಜೀವನದಲ್ಲಿ ಪ್ರಗತಿ ಇದೆ. ಶುಭದಿನ 2. ಕಾಲಭೈರವನ ಸೇವೆ ಮಾಡಿರಿ.

---




ವಾರದ ಶುರುವಿನಲ್ಲಿ ಉತ್ಪಾದನೆ ಹಾಗೂ ಮಾರಾಟ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಗುರಿ ತಲುಪುವುದು ಬಹಳ ಕಷ್ಟವಾಗುತ್ತದೆ. ಇನ್ನು ದಿನದಿನಕ್ಕೂ ಹೆಚ್ಚಾಗುತ್ತಿರುವ ಖರ್ಚನ್ನು ಕಡಿಮೆ ಮಾಡಿಕೊಳ್ಳಲು ಯೋಜನೆ ರೂಪಿಸುತ್ತೀರಿ. ಆದರೆ ಈ ಪ್ರಯತ್ನದಲ್ಲಿ ನಿಮಗೆ ಯಶಸ್ಸು ಸಿಗುವುದು ಕಷ್ಟವಾಗುತ್ತದೆ. ವಾರದ ಮಧ್ಯ ಭಾಗದಲ್ಲಿ ವೈವಾಹಿಕ ಜೀವನದಲ್ಲಿ ಪ್ರಗತಿ ಇದೆ. ಶುಭದಿನ 4. ಲಿಂಗಾಷ್ಟಕ ಪಠಿಸಿರಿ.

---




ಮ್ಮ ತಾಂತ್ರಿಕ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಲವು ವ್ಯಕ್ತಿಗಳ ಪರಿಚಯ ಆಗುತ್ತದೆ. ನಿಮ್ಮಲ್ಲಿ ಆಗುತ್ತಿರುವ ಸಕಾರಾತ್ಮಕ ಪರಿಣಾಮ ಅನುಭವಕ್ಕೆ ಬರುತ್ತದೆ. ಸಂಗಾತಿ ಜತೆಗೆ ಇದನ್ನು ಹಂಚಿಕೊಳ್ಳುತ್ತೀರಿ. ಒಟ್ಟಾರೆಯಾಗಿ ಕುಟುಂಬದೊಳಗೆ ಸಂತಸದ ವಾತಾವರಣ ಇರುತ್ತದೆ. ಈ ವರೆಗಿನ ನಿಮ್ಮ ಆದಾಯ ಮೂಲಗಳಿಂದ ಬರುವ ಗಳಿಕೆ ಮತ್ತಷ್ಟು ಹೆಚ್ಚಾಗಲಿದೆ. ಶುಭದಿನ 3. ಶಿವಕವಚ ಪಠಣ ಮಾಡಿರಿ.

---




ವಾರದ ಶುರುವಿನಿಂದಲೇ ವೈಯಕ್ತಿಕ ಹಾಗೂ ವೃತ್ತಿಪರ ಜೀವನದಲ್ಲಿ ಹೆಸರು ಪಡೆಯಲಿದ್ದೀರಿ. ನಿಮ್ಮ ಈ ಪ್ರಯತ್ನದಲ್ಲಿ ಯಶಸ್ಸು ಪಡೆಯಲು ಹಲವು ಅವಕಾಶಗಳು ದೊರೆಯಲಿವೆ. ಸ್ಥಿರತೆ ಹಾಗೂ ದೃಢತೆ ಕಾಪಾಡಿಕೊಂಡು ಪ್ರಗತಿಯತ್ತ ಹೆಜ್ಜೆಗಳನ್ನು ಇಡುತ್ತೀರಿ. ಬಂಧುಗಳ ಬಾಂಧವ್ಯ ಮತ್ತಷ್ಟು ಗಟ್ಟಿಯಾಗುತ್ತದೆ. ವಾರದ ಕೊನೆಗೆ ಸಮಸ್ಯೆಗಳ ಕಾಣಿಸಿಕೊಳ್ಳಬಹುದು. ಶುಭದಿನ 2. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.

---




ವಾರದ ಆರಂಭದಲ್ಲಿ ವ್ಯವಹಾರ ವಿಸ್ತರಣೆಯತ್ತ ಹೆಚ್ಚು ಗಮನ ನೀಡುತ್ತೀರಿ. ಇದೇ ಮೊದಲ ಬಾರಿಗೆ ಮಾಡುತ್ತಿರುವ ವ್ಯಾಪಾರ ವ್ಯವಹಾರದ ಪ್ರಸ್ತಾವನೆಯಲ್ಲಿ ತಪ್ಪಾಗುವ ಸಾಧ್ಯತೆಗಳಿವೆ. ಸಣ್ಣ ಸಣ್ಣ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತಾ ದೊಡ್ಡದೊಂದು ಬದಲಾವಣೆಗೆ ಸಿದ್ಧರಾಗುತ್ತೀರಿ. ಮಕ್ಕಳಿಂದ ಸಂತೋಷ ಪಡುವ ಯೋಗ ನಿಮಗಿದೆ. ಶುಭದಿನ 2. ವಿಷ್ಣು ಸಹಸ್ರನಾಮ ಓದಿರಿ.

---




ವಾರದ ಆರಂಭದಲ್ಲಿ ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಹೆಚ್ಚು ಪ್ರಚಾರ ಮಾಡಲು ಸಮಯ ಮೀಸಲಿಡಲಿದ್ದೀರಿ. ನಿಮ್ಮ ಶ್ರಮಕ್ಕೆ ಸಿಗುವ ಪ್ರತಿಫಲ ವೇಗವಾಗಿ ದೊರೆಯುತ್ತಿದೆ ಎಂಬ ಅಂಶ ಗಮನಕ್ಕೆ ಬರಲಿದೆ. ವ್ಯಾಪಾರ, ಉದ್ಯಮಕ್ಕೆ ಸಂಬಂಧಿಸಿದಂತೆ ಕೆಲವು ಯೋಜನೆಗಳನ್ನು ಶೀಘ್ರವಾಗಿ ರೂಪಿಸಲಿದ್ದೀರಿ. ಶುಭದಿನ 4. ಚಂಡಿ ಪಾರಾಯಣ ಮಾಡಿರಿ.

---




ವಾರದ ಶುರುವಿನಲ್ಲಿ ಆರೋಗ್ಯದ ಬಗ್ಗೆ ಅಗತ್ಯವಾದ ಕಾಳಜಿ ವಹಿಸುವುದು ಬಹಳ ಮುಖ್ಯ. ವೈವಾಹಿಕ ಜೀವನ ಮಾಮೂಲಿಯಂತೆ ಮುಂದುವರಿಯಲಿದೆ. ಆದರೆ ಭವಿಷ್ಯದ ಬಗ್ಗೆ ಬಹಳ ಚಿಂತೆ ಮಾಡುತ್ತೀರಿ. ಏಕೆಂದರೆ ವಾರದ ಮಧ್ಯ ಭಾಗದ ಹೊತ್ತಿಗೆ ಕೆಲ ಸಮಸ್ಯೆಗಳು ನಿಮ್ಮನ್ನು ಕಾಡುವ ಸಾಧ್ಯತೆ ಇದೆ.  ಹಲ್ಲು ನೋವು, ತಲೆ ನೋವು ಕಾಡಲಿದೆ. ಶುಭದಿನ 2. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.